ಅಸಲು ದಾವಾ ನಂ.84/2024
ಡಿ ಡಬ್ಲು -1

ದಿನಾಂಕಃ 18-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ- ಪ್ರತಿವಾದಿ ಪರ ಶ್ರೀ . ಯು ಎಸ್ ಕೆ ವಕೀಲರಿಂದ .</u>

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ಆದ್ದರಿಂದ ದಾವಾ ಆಸ್ತಿಯಲ್ಲಿ ನನಗೂ ಸಹ ಪಾಲು ನೀಡಬೇಕು ಎಂದು ಕೋರುತ್ತೇನೆ.

<u>ಪಾಟೀಸವಾಲುಃ- ಪ್ರತಿವಾದಿ ನಂ.2 ರಿಂದ 5 ರವರ ಪರ ಶ್ರೀ. ವಿ ಬಿ ಟಿ ವಕೀಲರಿಂದ.</u>

ನನಗೆ ಇಬ್ಬರು ಹೆಂಡತಿಯರು ಇರುತ್ತಾರೆ. ಅವರಿಬ್ಬರು ಈಗ ಜೀವಿತ ಇರುತ್ತಾರೆ. ಮೊದಲನೇ ಹೆಂಡತಿಯ ಹೆಸರು ಪಾರವ್ವ, 2 ನೇ ಹೆಂಡತಿಯ ಹೆಸರು ಚನ್ನಬಸವ್ವ ಇರುತ್ತದೆ. ಪಾರವ್ವಳ ಜೊತೆ ನನ್ನದು ವಿವಾಹ ವಿಚ್ಛೇಧನ ಆಗಿಲ್ಲ. ನಾನು ಚಳ್ಳಾಳದಲ್ಲಿ ವಾಸ ಇರುತ್ತೇನೆ. ನನ್ನ ಮೂಲ ಊರು ಫಕ್ಕೀರನಂದಿಹಳ್ಳಿ ಇರುತ್ತದೆ. ನನ್ನ ತಂದೆ ಬಸವ್ವ ಇವಳನ್ನು ಯಾವಾಗ ಮದುವೆಯಾಗಿದ್ದರು ಎಂದು ಗೊತ್ತಿಲ್ಲ. ನನ್ನ ತಂದೆ ಬಸವ್ವಳ ಜೊತೆ ಬಾಳುವೆ ಮಾಡುವ ಹಬ್ಬ ಹರಿದಿನಗಳ ಪೋಟೋ ನನ್ನ ಬಳಿ ಇಲ್ಲ. ಅದೇ ರೀತಿ ಕುಟುಂಬ ಪಡಿತರ ಚೀಟಿ, ಆಧಾರ ಕಾರ್ಡ, ಚುನಾವಣಾ ಗುರುತಿನ ಚೀಟಿ, ನನ್ನ ತಂದೆಯೊಂದಿಗಿನ ಬಸವ್ವಳ ಇವಳ ಸಂಬಂಧ ತೋರಿಸಲು ಇಲ್ಲ. ನಾನು ಈ ಹಿಂದೆ ಸಾಕಷ್ಟು ಪ್ರಕರಣಗಳಲ್ಲಿ ಸಾಕ್ಷ್ಯ ನುಡಿದಿರುತ್ತೇನೆ. ಬಸಲಿಂಗಪ್ಪ ಮತ್ತು ನನ್ನ ತಂದೆ ಪಾಲು ವಿಭಾಗ ಮಾಡಿಕೊಂಡ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಅವು ಸುಟ್ಟು ಹೋಗಿರುವುದಾಗಿ ಸಾಕ್ಷಿ ಸ್ವತಃ ನುಡಿಯುತ್ತಾರೆ. ಪಾಲು ವಿಭಾಗ

ಮಾಡಿಕೊಂಡ ಬಗ್ಗೆ ನನ್ನ ಮನೆಯಲ್ಲಿ ದಾಖಲೆ ಇಲ್ಲ. ಈಗ ದಾವಾ ಆಸ್ತಿಗಳ ಪಹಣಿಗಳಲ್ಲಿ ಯಾರ ಹೆಸರು ಇರುತ್ತದೆ ಎಂದು ಗೊತ್ತಿಲ್ಲ. ನನ್ನ ತಂದೆಯಿಂದ ದಾವಾ ಆಸ್ತಿ ನನಗೆ ಬಂದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. 4 ನೇ ಪ್ರತಿವಾದಿಯ ಹೆಸರು ಪಹಣಿಯಲ್ಲಿ ದಾಖಲೆಯಾಗಿ ಎಷ್ಟು ವರ್ಷಗಳು ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು 4 ನೇ ಪ್ರತಿವಾದಿಗೆ ದಾವಾ ಆಸ್ತಿ ಬಿಟ್ಟು ಕೊಟ್ಟ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ಆದ್ದರಿಂದ 4 ನೇ ಪ್ರತಿವಾದಿಯ ಹೆಸರು ದಾವಾ ಆಸ್ತಿಗೆ ಹೇಗೆ, ಯಾವಾಗ ದಾಖಲಾಯಿತು ಎಂಬ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. 4 ನೇ ಪ್ರತಿವಾದಿಯ ವಿರುದ್ಧ ನಾನು ದಾವಾ ಆಸ್ತಿಯ ಸಂಬಂಧ ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಸರಿ.

2. ಬಸವ್ವಳ ವಿವಾಹ ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪಾರವ್ವಳ ವಿವಾಹ ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಚನ್ನಬಸವ್ವ ಇವಳ ವಿವಾಹ ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಬಸವ್ವ ಯಾವ ದಿನಾಂಕಂದು ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದನ್ನು ಹೊರತುಪಡಿಸಿ ನನಗೆ ಏನು ಗೊತ್ತಿಲ್ಲ ಎಂದರೆ ಸರಿ. 4 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಎಷ್ಟು ವರ್ಷಗಳಿಂದ ಕಬ್ಜಾ ವಹಿವಾಟು ಮಾಡುತ್ತಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರಿ ಸುಮಾರು 25 ವರ್ಷಗಳಿಂದ 4 ನೇ ಪ್ರತಿವಾದಿಯ ಹೆಸರು ದಾವಾ ಆಸ್ತಿಯ ಪಹಣಿಯಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ನನಗೆ ಬಸವಣ್ಣೆಪ್ಪ ಇವರಿಂದ ಹೇಗೆ ಬಂತು ಮತ್ತು ನನ್ನಿಂದ 4 ನೇ ಪ್ರತಿವಾದಿಗೆ ಹೇಗೆ ಹೋಯಿತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳ ನಂಬರುಗಳು ನನಗೆ ಹೇಳಲು ಬರುವುದಿಲ್ಲ. ಮನೆ

ಅಸಲು ದಾವಾ ನಂ.84/2024<br>ಡಿ ಡಬ್ಲು -1

ಮತ್ತು ಹಿತ್ತಲು ಜಾಗೆಯ ಆಸ್ತಿಯ ನಂಬರ ನನಗೆ ಗೊತ್ತಿಲ್ಲ. ನಾನು ವಾದಿ ನಂ.1 ನನ್ನನ್ನು ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿದ್ದರ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. 4 ನೇ ಪ್ರತಿವಾದಿ ನನಗೆ ಮೋಸ ಮಾಡಿಲ್ಲ.

**<u>ಪಾಟೀಸವಾಲುಃ</u>** ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು<br>ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.<br>(ಸ್ಥಳಃ ಸವಣೂರ).